

ಮದರ್ಸ್ ಡೇ ಸ್ಪೆಷಲ್

# ಅಮ್ಮನಿಗೇನು ಗಿಫ್ಟ್?

ಮೇ ತಿಂಗಳ ಎರಡನೇ ಭಾನುವಾರ (ಮೇ 12) 'ಅಮ್ಮಂದಿರ ದಿನ'. ಈ ದಿನದಂದು ಅಮ್ಮನ ಕಣ್ಣಲ್ಲಿ ಬೆಳಕು ಮೂಡಿಸಲು ಏನು ಮಾಡಬೇಕು. ಇಲ್ಲಿನ ಕೆಲವು ಆರ್ದ್ರ ಅನುಭವಗಳು ನಿಮಗೂ ಆಪ್ತವೆನ್ನಿಸಬಹುದು, ಸಹಾಯಕವಾಗಬಹುದು.

■ ಸ್ವಯಂಪ್ರಭಾ

'ಅಮ್ಮಂದಿರ ದಿನ'ಕ್ಕೆ ಅಮ್ಮನಿಗೆ ಏನು ಉಡುಗೊರೆ ಕೊಡುವುದು? ಅಮ್ಮನ ಪ್ರೀತಿಯ ಮುಂದೆ ಎಂಥ ಉಡುಗೊರೆಯೂ ಕಳಾಹೀನವೇ. ಆದರೆ, ಅಮ್ಮನಿಗೆ ಗಿಫ್ಟ್ ಕೊಟ್ಟಾಗ ಅವಳ ಕಣ್ಣಲ್ಲಿ ಮಿನುಗುವ ಕಾಂತಿಗೆ ಬೆಲೆ ಕಟ್ಟಲಾದೀತೆ? ಆ ಜೀವಕಾರುಣ್ಯದ ಹೊಳಪನ್ನು ಕಣ್ತುಂಬಿಕೊಳ್ಳುವ ಭಾಗ್ಯಕ್ಕಾದರೂ ಅಮ್ಮನಿಗೊಂದು ಗಿಫ್ಟ್ ಕೊಡಲೇಬೇಕು. ಆದರೆ, ಕೊಡುವುದೇನು? ಕೆಲವು ಕರುಳಕುಡಿಗಳು ತಮ್ಮ ಅಮ್ಮಂದಿರಿಗೆ ಕೊಟ್ಟ ವಿಭಿನ್ನ ಉಡುಗೊರೆಗಳನ್ನು ನೋಡೋಣ ಬನ್ನಿ.

ಅಮ್ಮನಿಗೆ ಏನಾದರೂ ಕೊಡಲು ದಿಶಾಳಿಗೆ ಆಸೆ. ಆದರೆ, ತನ್ನಮ್ಮನಿಗೆ ಏನು ಬೇಕೆಂದು ಅಂದಾಜು ಮಾಡುವುದೇ ಅವಳಿಗೆ ಕಷ್ಟ. ಗಿಫ್ಟ್ ಬಗ್ಗೆ ಯೋಚಿಸುವಾಗ ದಿಶಾಳಿಗೆ ನೆನಪಾದುದು– ಅದೊಂದು ದಿನ ದೇವಸ್ಥಾನವೊಂದರಲ್ಲಿ ದೇವರ ಸೀರೆಯನ್ನು ಚಿಕ್ಕ ತುಣುಕುಗಳನ್ನಾಗಿಸಿ ಪ್ರಸಾದದ ರೂಪದಲ್ಲಿ ನೀಡಿದ ಘಟನೆ. ಅಂದು ಪ್ರಸಾದದ ಹೆಸರಲ್ಲಿ ಬೊಗಸೆಗೆ ಬಿದ್ದ ಪೀಸು ಹಸಿರು ಬಣ್ಣದ್ದು. ಅದರ ಮೇಲೆ ಕಂಡೂ ಕಾಣದಂತೆ ತಿಳಿಯಾದ ಹಳದಿ ಗೀರು. ಅಂಚಿನಲ್ಲಿ ಎರಡೆಳೆಯ ಸರದಂತೆ ಚಿನ್ನದ ಬಣ್ಣದ ಗೀರುಗಳು. ಆ ವಸ್ತ್ರವನ್ನು ನೋಡಿ, 'ಎಷ್ಟು ಚಂದ ಇದೆ ಅಲ್ವ ಮಗ...' ಅಂತ ಅಮ್ಮ ಹೇಳಿದ್ದು ದಿಶಾಳಿಗೆ ನೆನಪಿದೆ. ಆ ಘಟನೆಯ ಜೊತೆಗೆ, 'ಅಮ್ಮ ನಾನು ದೊಡ್ಡವಳಾದ ಮೇಲೆ ನಿನಗೆ ಹಸಿರು ಸೀರೆ ತಂದು ಕೊಡುತ್ತೇನೆ' ಎಂದು ತಾನು ಹೇಳುತ್ತಿದ್ದುದೂ ನೆನಪಾಗಿದೆ. ಈ ನೆನಪುಗಳ ಚುಂಗು ಹಿಡಿದು ದಿಶಾ ಹಲವು ಅಂಗಡಿಗಳನ್ನು ತಡಕಿ ಹಸಿರು ಸೀರೆಯೊಂದನ್ನು ತಂದು ಗುಟ್ಟಾಗಿಟ್ಟಿದ್ದಾಳೆ. 'ಅಮ್ಮಂದಿರ ದಿನ'ದಂದು ಈ ಸೀರೆ ಅಮ್ಮನ ಕೈಗಿಟ್ಟಾಗ ಅವಳ ಮುಖದಲ್ಲಿ ಮೂಡುವ ಭಾವ ಯಾವುದು ಎನ್ನುವುದು ಸದ್ಯಕ್ಕೆ ದಿಶಾಳ ಕುತೂಹಲ.

ಸುರೇಶನ ಕಥೆ ಕೇಳಿ. 'ನನಗೇನೂ ಬೇಡ' ಎನ್ನುವ ಅಮ್ಮನನ್ನು ನೋಡುತ್ತಲೇ ಬೆಳೆದವ ಅವ. ತನ್ನ ಹುಟ್ಟಿದ ದಿನ ಯಾವಾಗ ಎನ್ನುವುದು ಅವಳಿಗೆ ಗೊತ್ತಿಲ್ಲ. 'ಕಾರ್ತೀಕದಲ್ಲಿ ಹುಟ್ಟಿದೆನಂತೆ' ಎಂದು ಯಾವಾಗಾದ್ರೂ ಹೇಳಿಕೊಳ್ಳುವುದುಂಟು. 'ನಾನಂತೂ ಅಮ್ಮಂದಿರ ದಿನದಂದೇ ಅಮ್ಮನಿಗೆ